## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಡಾ. ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1151 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |
| ಉತ್ತರಿಸಬೇಕಾದ ದಿನಾಂಕ | : | 20.12.2018 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕದಲ್ಲಿರುವ ರೇಷ್ಮೆ ಮತ್ತು ಹತ್ತಿ ಜವಳಿ ಉದ್ಯಮದ ಸ್ಥಿತಿ ಗತಿ ಹೇಗಿದೆ ; ರೇಷ್ಮೇ ನೂಲು. ಹತ್ತಿ ನೂಲಿನ ಉತ್ಪಾದನಾ ಸಾಮರ್ಥ್ಯ ಮಾರುಕಟ್ಟೆ ವ್ಯವಸ್ಥೆ ಹೇಗಿದೆ: | **ರೇಷ್ಮೆ ಉದ್ಯಮದ ವಿವರ :** (see below) |

**ರೇಷ್ಮೆ ಉದ್ಯಮದ ವಿವರ :**

- ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೇಷ್ಮೆ ನೂಲು ಬಿಚ್ಚಣಿಕೆಗಳ ಘಟಕಗಳು ಹಾಗೂ ಉತ್ಪಾದನಾ ಸಾಮರ್ಥ್ಯದ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ಘಟಕದ ವಿವರ | ಬೇಸಿನ್‌ಗಳ ಸಂಖ್ಯೆ | ವಾರ್ಷಿಕ ಉತ್ಪಾದನಾ ಸಾಮಾರ್ಥ್ಯ (ಮೆಟ್ರಿಕ್ ಟನ್) |
|---|---|---|---|
| 1 | ಚರಕಾ | 5221 | 1500 |
| 2 | ಕಾಟೇಜ್ ಬೇಸಿನ್ | 18472 | 4800 |
| 3 | ಮಲ್ಟಿಎಂಡ್ | 2178 | 718 |
| 4 | ಸ್ವಯಂಚಾಲಿತ ರೀಲಿಂಗ್ ಘಟಕ | 670 | 720 |
| | ಒಟ್ಟು | **26541** | **7738** |

- ಈ ಮೇಲೆ ವಿವರಿಸಿದ ಉತ್ಪಾದನಾ ಘಟಕಗಳಿಂದ 2017-18ನೇ ಸಾಲಿನಲ್ಲಿ ಒಟ್ಟು 6326 ಮೆಟ್ರಿಕ್ ಟನ್ ಮತ್ತು 2018-19ನೇ ಸಾಲಿನ ನವೆಂಬರ ಅಂತ್ಯಕ್ಕೆ ಒಟ್ಟು 5512 ಮೆಟ್ರಿಕ್ ಟನ್ ಕಚ್ಚಾ ರೇಷ್ಮೆಯನ್ನು ರಾಜ್ಯದಲ್ಲಿ ಉತ್ಪಾದಿಸಲಾಗಿದೆ.
- ರಾಜ್ಯದಲ್ಲಿ ಕಚ್ಚಾ ರೇಷ್ಮೆ ನೂಲು ಮಾರಾಟಕ್ಕಾಗಿ 2006ರಲ್ಲಿ ಕೇಂದ್ರ ರೇಷ್ಮೆ ಕಾಯ್ದೆಗೆ ತಿದ್ದುಪಡಿ ತಂದಿದ್ದು, ರೇಷ್ಮೆಯನ್ನು ಮುಕ್ತವಾಗಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ.
- ಇದರಿಂದ, ರೇಷ್ಮೆ ಬಿಚ್ಚಣಿಕೆದಾರರು, ಉತ್ಪಾದಿಸಿದ ರೇಷ್ಮೆಯನ್ನು ನೇರವಾಗಿ ವರ್ತಕರಿಗೆ, ಹುರಿ ಮಾಡುವವರಿಗೆ ಮತ್ತು ನೇಕಾರರಿಗೆ ಮಾರಾಟ ಮಾಡಬಹುದಾಗಿದೆ.
- ಕಚ್ಚಾ ರೇಷ್ಮೆಗೆ ಉತ್ತಮ ದರ ದೊರಕಿಸುವ ಸಲುವಾಗಿ ರಾಜ್ಯದಲ್ಲಿ ಬೆಂಗಳೂರು, ರಾಮನಗರ, ಕನಕಪುರ, ಕೋಲಾರ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಕೊಳ್ಳೇಗಾಲ, ಚಾಮರಾಜನಗರ, ಗುಳೇದಗುಡ್ಡ ಮತ್ತು ಗದಗಗಳಲ್ಲಿ ಒಟ್ಟಾರೆ 10 ರೇಷ್ಮೆ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

**ಹತ್ತಿ ಉದ್ಯಮದ ವಿವರ :**

- ರಾಜ್ಯದಲ್ಲಿ ಒಟ್ಟು 39 ಹತ್ತಿ ನೂಲಿನ ಗಿರಣಿಗಳಿದ್ದು, ಸಹಕಾರಿ ವಲಯದಲ್ಲಿ 11, ಖಾಸಗಿ ವಲಯದಲ್ಲಿ 28 ನೂಲಿನ ಗಿರಣಿಗಳಿವೆ. ಪ್ರಸ್ತುತ ಖಾಸಗಿ ವಲಯದಲ್ಲಿ 06 ಮತ್ತು ಸಹಕಾರಿ ವಲಯದಲ್ಲಿ 05 ಹತ್ತಿ ನೂಲಿನ ಗಿರಣಿಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ.
- ಈ ಕಾರ್ಯನಿರತ ಗಿರಣಿಗಳಲ್ಲಿ ಸ್ಥಾಪಿತವಾಗಿರುವ ಸ್ಪಿಂಡಲ್‌ಗಳ ಸಂಖ್ಯೆ ಮತ್ತು ವಾರ್ಷಿಕ ಹತ್ತಿ ನೂಲಿನ ಉತ್ಪಾದನಾ ಸಾಮರ್ಥ್ಯದ ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ಹತ್ತಿ ನೂಲಿನ ಗಿರಣಿಗಳ ವಿವರ | ಸ್ಥಾಪಿಸಲಾದ ಸ್ಪಿಂಡಲ್‌ಗಳ ಸಂಖ್ಯೆ | ವಾರ್ಷಿಕ ಉತ್ಪಾದನಾ ಸಾಮರ್ಥ್ಯ (ಟನ್‌ಗಳಲ್ಲಿ) |
|---|---|---|---|
| 1 | ಖಾಸಗಿ ಗಿರಣಿಗಳು | 153920 | 17509.42 |
| 2 | ಸಹಕಾರಿ ಗಿರಣಿಗಳು | 104590 | 9400.00 |
| | ಒಟ್ಟು | **258510** | **26909.42** |

- ನೂಲಿನ ಕಚ್ಚಾ ಸಾಮಗ್ರಿಯಾದ ಹತ್ತಿಯ ಬೆಲೆಯಲ್ಲಿ ಏರಿಕೆ ಇರುವುದರಿಂದ ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿದ್ದು, ಉತ್ಪಾದಿಸಿದ ನೂಲಿನ ಬೆಲೆಯಲ್ಲಿ ಕುಸಿತ ಇರುವುದರಿಂದ ಹತ್ತಿ ನೂಲಿನ ಉತ್ಪಾದನೆಗೆ ತೊಂದರೆಯಾಗಿರುತ್ತದೆ.
- ರಾಜ್ಯದಲ್ಲಿ ಉತ್ಪಾದಿಸಿದ ಹತ್ತಿ ನೂಲಿನ ಮಾರುಕಟ್ಟೆಗೆ ಹೊರ ರಾಜ್ಯಗಳ ಮೇಲೆ ಅವಲಂಬಿಸಬೇಕಾಗಿರುತ್ತದೆ.

ಆ | ಗ್ರಾಮೀಣ ಭಾಗದ ಅದರಲ್ಲೂ ಉತ್ತರ ಕರ್ನಾಟಕ ಯುವ ಜನತೆಗೆ ಈ ಜವಳಿ ಉದ್ಯಮದಿಂದ ಲಭಿಸಿರುವ ತರಬೇತಿ ಹಾಗೂ ಉದ್ಯೋಗಾವಕಾಶಗಳ ಬಗ್ಗೆ ತಿಳಿಸುವುದು;

- ಉತ್ತರ ಕರ್ನಾಟಕದ ಗ್ರಾಮೀಣ ಭಾಗದ 18 ರಿಂದ 35 ವಯಸ್ಸಿನ ಒಳಗೆ ಇರುವ ನಿರುದ್ಯೋಗ ಯುವಕ/ಯುವತಿಯರಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ವೃತ್ತಿ ಕೌಶಲ್ಯ ತರಬೇತಿಗಳಾದ ಸೀವಿಂಗ್ ಮೆಷಿನ್ ಅಪರೇಟರ್, ಕೈಮಗ್ಗ ನೇಯ್ಗೆ ಹಾಗೂ ವಿದ್ಯುತ್‌ಮಗ್ಗ ನೇಯ್ಗೆ ವೃತ್ತಿಗಳಲ್ಲಿ 45 ದಿನಗಳ ಅವಧಿಯ ತರಬೇತಿ ನೀಡಲಾಗುತ್ತಿದೆ.
- 2017-18 ಮತ್ತು 2018-19ನೇ ಸಾಲಿನ ನವೆಂಬರ ಅಂತ್ಯದವರೆಗೆ ಒದಗಿಸಲಾದ ತರಬೇತಿ ವಿವರ ಹಾಗೂ ಜವಳಿ ಕೈಗಾರಿಕೆಗಳಲ್ಲಿ ಒದಗಿಸಲಾದ ಉದ್ಯೋಗ ಅವಕಾಶಗಳ ವಿವರಗಳು ಈ ಕೆಳಕಂಡಂತಿವೆ :

| ವರ್ಷ | ತರಬೇತಿ ಪಡೆದವರ ಸಂಖ್ಯೆ | | ಕಲ್ಪಿಸಲಾದ ಉದ್ಯೋಗ (ಫಲಾನುಭವಿಗಳ ಸಂಖ್ಯೆ) | |
|---|---|---|---|---|
| | ಒಟ್ಟು ರಾಜ್ಯದಲ್ಲಿ | ಉತ್ತರ ಕರ್ನಾಟಕದಲ್ಲಿ | ಒಟ್ಟು ರಾಜ್ಯದಲ್ಲಿ | ಉತ್ತರ ಕರ್ನಾಟಕದಲ್ಲಿ |
| 2017-18 | 13556 | 6054 | 10297 | 5111 |
| 2018-19 | 7065 | 3178 | 1245 | 195 |

| | | |
|---|---|---|
| ಇ | ನಷ್ಟದಲ್ಲಿರುವ ರೋಗಗ್ರಸ್ಥ ಸ್ಥಿತಿಯಲ್ಲಿರುವ ಗಿರಣಿಗಳ ಸಂಖ್ಯೆ ಎಷ್ಟು; | ರಾಜ್ಯದ 06 ಸಹಕಾರಿ ನೂಲಿನ ಗಿರಣಿಗಳು ಮತ್ತು 22 ಖಾಸಗಿ ಗಿರಣಿಗಳು ಸೇರಿ ಒಟ್ಟು 28 ನೂಲಿನ ಗಿರಣಿಗಳು ಸ್ಥಗಿತಗೊಂಡಿರುತ್ತವೆ. |
| ಈ | ಇವುಗಳನ್ನು ಪುನಃಶ್ಚೇತನಗೊಳಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ನಷ್ಟದಲ್ಲಿರುವ ಸಹಕಾರಿ ಹತ್ತಿ ನೂಲಿನ ಗಿರಣಿಗಳನ್ನು ಪುನಶ್ಚೇತನಗೊಳಿಸಲು ಸರಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:<br>• ರಾಜ್ಯದ 09 ಸಹಕಾರಿ ನೂಲಿನ ಗಿರಣಿಗಳಿಂದ ಸರ್ಕಾರಕ್ಕೆ ಪಾವತಿಸಲು ಬಾಕಿ ಇದ್ದ ಸಾಲದ ಮೊತ್ತ ರೂ.99.01 ಕೋಟಿಯನ್ನು ಸರ್ಕಾರದ ಷೇರನ್ನಾಗಿ ಪರಿವರ್ತಿಸಲು ಹಾಗೂ ಸದರಿ ಸಾಲದ ಮೇಲಿನ ಬಡ್ಡಿ ಮತ್ತು ದಂಡದ ಬಡ್ಡಿ ಮೊತ್ತ ರೂ.173.98 ಕೋಟಿಯನ್ನು ಮನ್ನಾ ಮಾಡಲು ಸರ್ಕಾರದ ಆದೇಶ ಸಂಖ್ಯೆ:ವಾಕೈ 77 ಜಕೈಯೋ 2015 ದಿನಾಂಕ:02.02.2016ರಲ್ಲಿ ಆದೇಶ ಹೊರಡಿಸಲಾಗಿದೆ.<br>• ಸಹಕಾರಿ ನೂಲಿನ ಗಿರಣಿಗಳು ನಷ್ಟ ಹೊಂದುತ್ತಿರುವುದರಿಂದ ಗಿರಣಿಗಳು ಉತ್ಪಾದನೆಗಾಗಿ ಉಪಯೋಗಿಸಿದ ವಿದ್ಯುತ್ಶಕ್ತಿಯ ಪ್ರತಿ ಯುನಿಟ್‌ಗೆ ರೂ.2/-ರಂತೆ ಸರ್ಕಾರದಿಂದ ಸಹಾಯಧನವನ್ನು ನೀಡಲಾಗುತ್ತಿದೆ.<br>• ಸಹಕಾರಿ ನೂಲಿನ ಗಿರಣಿಗಳು ನೂಲಿನ ಉತ್ಪಾದನೆಗಾಗಿ ಭಾರತೀಯ ಹತ್ತಿ ನಿಗಮದಿಂದ (ಕಾಟನ್ ಕಾರ್ಪೋರೇಶನ್ ಆಫ್ ಇಂಡಿಯಾ)ದಿಂದ ಖರೀದಿಸುವ ಹತ್ತಿ ಬೆಲೆಯ ಮೊತ್ತದಲ್ಲಿ ಶೇ.5ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ. |

**ವಾಕೈ 107 ಜಕೈಇ 2018**

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ.